(ಈ) ಜೂನಿಯರ್ ಫಿಜಿಷಿಯನ್ ವೇತನ ಶ್ರೇಣಿ ರೂ. ೬೬೦–೧೫೦೦ (ನಾನ್ ಗೆಜೆಟೆಡ್) ಮತ್ತು ಸೀನಿಯರ್ ಫಿಜಿಷಿಯನ್ ವೇತನ ಶ್ರೇಣಿ ರೂ. ೭೫೦–೧೫೨೫ (ಗೆಜೆಟೆಡ್).

(ಉ) ನಾನ್ ಟೀಚಿಂಗ್ ಸಿ. ಅಂಡ್. ಆರ್ ರೂಲ್ಸ್ ಇನ್ನು ಸರಕಾರದಿಂದ ಒಪ್ಪಿಗೆ ಆಗದಿದ್ದುದರ ಕಾರಣ ಯಾರನ್ನು ನೇಮಕ ಮಾಡಿಲ್ಲ.

ಯಂಶವಂತಪುರದಲ್ಲಿ ಮಾರುಕಟ್ಟೆಯನ್ನು ಕಟ್ಟುವುದು

೬. (೨) ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ)—ಕ್ರಮಗೊಳಿಸಿದ ಮಾರುಕಟ್ಟೆಗಳ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟುತಿಳಿಸುವರೆ.—

(ಅ) ಯಶವಂತಪುರದಲ್ಲಿ ಮಾರುಕಟ್ಟೆಯನ್ನು ಕಟ್ಟಲು ಸರಕಾರ ಒಪ್ಪಿದೆಯೇ;

(ಆ) ಈ ಮಾರುಕಟ್ಟೆಗೆ ತಗಲುವ ಅಂದಾಜು ವೆಚ್ಚವೆಷ್ಟು;

(ಇ) ಈ ಬಗ್ಗೆ ಬಂದ ಟೆಂಡರ್‌ಗಳನ್ನು ವಿಲೇವಾರಿ ಮಾಡಲಾಗಿದೆಯೇ;

(ಈ) ಆಂಗೀಕೃತ ಟೆಂಡರುದಾರರು ಇನ್ನೂ ಈ ಮಾರುಕಟ್ಟೆ ಬಗ್ಗೆ ಕೆಲಸ ಪ್ರಾರಂಭ ಮಾಡದಿರುವುದು ನಿಮ್ಮ ಗಮನಕ್ಕೆ ಬಂದಿದೆಯೇ;

(ಉ) ಇನ್ನು ಎಷ್ಟು ತಿಂಗಳೊಳಗಾಗಿ ಈ ಮಾರುಕಟ್ಟೆಯು ಜನರ ಉಪಯೋಗಕ್ಕಾಗಿ ಬಳಸಲಾಗುವುದು?

ಕ್ರಮಗೊಳಿಸಿದ ಮಾರುಕಟ್ಟೆಗಳ ರಾಜ್ಯಮಂತ್ರಿಗಳು (ಶ್ರೀ ಎ. ಬಿ. ಜಕನೂರ್)—

(ಅ) ಒಪ್ಪಿದೆ.

(ಆ) ಇಲ್ಲಿಯವರೆಗೆ ಸದರಿ ಮಾರುಕಟ್ಟೆ ಯಾರ್ಡಿನಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ೭೪,೭೯, ೫೧೨–೭೬ ರೂಪಾಯಿ ವೆಚ್ಚಾಗಿದೆ. ಮಾರುಕಟ್ಟೆಯು ಯಾವಾಗಲೂ ಅಭಿವೃದ್ಧಿ ಹೊಂದುತ್ತಿರುವುದರಿಂದ ಯಾರ್ಡಿಗೆ ತಗಲುವ ಅಂದಾಜು ವೆಚ್ಚವನ್ನು ಪೂರ್ಣವಾಗಿ ಈಗಲೇ ಹೇಳಲು ಸಾಧ್ಯವಾಗುವುದಿಲ್ಲ.

(ಇ) ಈ ಬಗ್ಗೆ ಬಂದ ಟೆಂಡರುಗಳನ್ನು ಇದುವರೆವಿಗೂ ವಿಲೇವಾರಿ ಮಾಡಲಾಗಿದೆ.

(ಈ) ಸರ್ಕಾರದ ಗಮನಕ್ಕೆ ಬಂದಿಲ್ಲ.

(ಉ) ಸದರಿ ಮಾರುಕಟ್ಟೆ ಯಾರ್ಡು ಜನರ ಉಪಯೋಗಕ್ಕಾಗಿ ಬಳಸಲು ಅರ್ಹವಾಗಿದೆ. ಈಗಾಗಲೇ ಅನೇಕ ರೈತರು ಮತ್ತು ವರ್ತಕರು ಮಾರುಕಟ್ಟೆಯನ್ನು ಉಪಯೋಗಿಸುತ್ತಿದ್ದಾರೆ.

ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದಲ್ಲಿರುವ ಬೀದಿ ದೀಪಗಳು

೩. (೮) SRI P. RAMDEV. (Malleswaram).— **Will the Minister for Information and Youth Services be pleased to state.—**

(ಅ) ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದಲ್ಲಿ ಹಾಲಿ ಇರುವ ಬೀದಿ ದೀಪಗಳೆಷ್ಟು ಕೊಕ್ಕರೆ ಕತ್ತಿನ ವೆಪ್ಕ್ಯೂ, ಕೊಳವೆ ದೀಪಗಳೆಷ್ಟು,

(ಆ) ಈ ಬೀದಿ ದೀಪಗಳಲ್ಲಿ ಅನೇಕ ದೀಪಗಳು ಹಲವಾರು ತಿಂಗಳಿನಿಂದಲೂ ಉರಿಯದಿರಲು ಕಾರಣವೇನು?

(ಇ) ಉರಿಯದಿರುವ ದೀಪಗಳ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದರೂ ಸರಿಯಾದ ಕ್ರಮ ತೆಗೆದುಕೊಳ್ಳದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ,

(ಈ) ಈ ಕ್ಷೇತ್ರದಲ್ಲಿ ಅನೇಕಾನೇಕ ಬೀದಿಗಳಲ್ಲಿ ಹೊಸ ದೀಪಗಳನ್ನು ಹಾಕಲು ತೆಗೆದುಕೊಂಡ ಕ್ರಮಗಳೇನು?,

(ಉ) ಬೆಂಗಳೂರಿನಲ್ಲಿ ಬೀದಿ ದೀಪಗಳಿಗಾಗಿ ಖರ್ಚು ಮಾಡುತ್ತಿರುವ ಹಣವೆಷ್ಟು?